ಎಷ್ಟು ಕೊಡುತ್ತಾರೆ? ಪುರಸಭೆಗಳಿಗೆ ಎಷ್ಟು ಕೊಡುತ್ತಾರೆ, ಎಲ್ಲಿ ಸೇರಿದರೆ 65 ರಿಂದ 70 ಸೀಟು 20 ತಿಂಗಳ ಕಾಲಾವಧಿಗೆ ಕೊಡುತ್ತಾರೆ. ಅವನು ಮೆಜಾರಿಟಿ ಒಪೀನಿಯನ್ ಪ್ರಕಾರ ನಡೆದುಕೊಳ್ಳಬೇಕು. ಇನ್ನು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಇದ್ದಾಗ ಮಾನ್ಯ ಚಂದ್ರೇಗೌಡರು ಹೇಳುತ್ತಿದ್ದರು, ನಾನು ಯೂನಿವರ್ಸಿಟಿಗಳಲ್ಲಿ ರಿವ್ಯೂ ಮಾಡಿದೆ, ಮುನಿಸಿಪಾಲಿಟಿಗಳಲ್ಲಿ ಹೋಗಿ ರಿವ್ಯೂ ಮಾಡಿದೆ 15 ಪರ್ಸೆಂಟ್ ಹಣ 20-30 ವರ್ಷಗಳಿಂದ ಖರ್ಚು ಮಾಡಿರಲಿಲ್ಲ, ಹಾಗೆಯೇ ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದರು. ತಪ್ಪದೆ ಚಂಬು ಹಂಚುತ್ತೇವೆಂದು ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು. ಅದಾದ ಮೇಲೆ ಕೆಲವು ಕಠಿಣವಾದ ಕಾನೂನುಗಳನ್ನು ಜಾರಿಗೊಳಿಸಬೇಕೆಂದು ಹೇಳಿದ ಮೇಲೆ ಸ್ವಲ್ಪ ಮಟ್ಟಿಗೆ ಅಲ್ಲಿರತಕ್ಕಂತಹ ಚೀಫ್ ಆಫೀಸರ್‌ಗೆ ಸೋಷಿಯಲ್ ಕಮಿಟ್‌ಮೆಂಟ್ ಇರುತ್ತದೆ. ಅಲ್ಲಿರತಕ್ಕಂತಹ ಡಿಸಿಗಳಿಗೆ ಸೋಷಿಯಲ್ ಕಮಿಟ್‌ಮೆಂಟ್ ಇರುತ್ತದೆ ಅಂತಹ ಸಂದರ್ಭದಲ್ಲಿ ಈ ವರ್ಗದ ಜನಗಳಿಗೆ ಎತ್ತಿ ಹಿಡಿಯುವ ಕೆಲಸ ಮಾಡುತ್ತಾರೆ. ಆದ್ದರಿಂದ ತಾವು ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಇದನ್ನು ಯೋಚನೆ ಮಾಡಿ ಸರ್ಕಾರದ ಒಪ್ಪಿಗೆ ಪಡೆದು ಇದನ್ನು ಈ ವರ್ಗದ ಜನಗಳಿಗೆ ಸಾಮಾಜಿಕ ಭದ್ರತೆ ಕೊಡುವ ದೃಷ್ಟಿಯಿಂದ ಏನು ತಂದಿದ್ದೀರಿ ಇದು ಬಹಳ ದೊಡ್ಡ ಕೆಲಸ ಎಂದು ನಾನು ಹೇಳುವುದಿಲ್ಲ, ನನ್ನ ದೃಷ್ಟಿಯಲ್ಲಿ ಆ ವರ್ಗದ ಜನಗಳಿಗೆ ಆತ್ಮ ವಿಶ್ವಾಸ ತುಂಬತಕ್ಕಂತಹ ಕಾನೂನು ಇದನ್ನು ನಾನು ಸಮರ್ಥನೆ ಮಾಡುತ್ತೇನೆ.

8. ಪ್ರಕಟಣೆ

ಅಧ್ಯಕ್ಷರು :- (ಅ) ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 29ನೇ ಮಾರ್ಚ್ 2003ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2003.
2. ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, 2003.
3. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯ, 2003.
4. ಕರ್ನಾಟಕ ಸ್ಟಾ ್ಯಂಪ್ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2003.
5. ಕರ್ನಾಟಕ ಸ್ಟಾ ್ಯಂಪ್ (ತಿದ್ದುಪಡಿ) ವಿಧೇಯಕ, 2003.
6. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿದೇಯಕ, 2003.
7. ಕರ್ನಾಟಕ ನ್ಯಾಯಾಲಯ ಫೀಸು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕ, 2003.

ಅಧ್ಯಕ್ಷರು :- (ಆ) ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಎ. ಕೃಷ್ಣಪ್ಪ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವರಾದ ವಿ. ಮುನಿಯಪ್ಪನವರು ಮಾನ್ಯ ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಸದಸ್ಯರ ಗೌರವಾರ್ಥ ಇಂದು ಮಧ್ಯಾಹ್ನ ಒಂದೂವರೆ ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನವನ್ನು ಏರ್ಪಡಿಸಿರುತ್ತಾರೆ. ಭೋಜನ ಕೂಟದ ನಂತರ ತೆಗೆದುಕೊಳ್ಳೋಣ.